ಸಹಿತ ಇದುವರೆಗೂ ಕನೆಕ್ಷನ್ ಕೊಟ್ಟಿಲ್ಲ. ಇದುವರೆಗೆ ವಿದ್ಯುತ್ ಕನೆಕ್ಷನ್ ಏಕೆ ಕೊಟ್ಟಿಲ್ಲ, ಏಕೆ ತಡವಾಯಿತು, ಎಷ್ಟು ದಿವಸಗಳಲ್ಲಿ ಕೊಡುತ್ತೀರೆಂಬುದನ್ನು ಮಾನ್ಯ ಸಚಿವರು ತಿಳಿಸಬೇಕು.

ಅಧ್ಯಕ್ಷರು : ಈ ವಿಷಯವನ್ನು ವಿದ್ಯುತ್ ಸಚಿವರ ಬಳಿ ಕೇಳಿ ಅವರು ಇದಕ್ಕೆ ಉತ್ತರವನ್ನು ಕೊಡುತ್ತಾರೆ.

ಕೆ. ಷಡಾಕ್ಷರಿ : ಮಾನ್ಯ ಅಧ್ಯಕ್ಷರೆ, ಇವರು ಎಂಟು ವರ್ಷಗಳಿಂದ ಎಂಟು ತಾಲ್ಲೂಕುಗಳನ್ನು ಕಷ್ಟ ಪ್ರದೇಶವೆಂದು ಘೋಷಣೆ ಮಾಡಿದ್ದಾರೆ. ಈಗ ತುಮಕೂರು ಜಿಲ್ಲೆಯಲ್ಲಿ ಮತ್ತೆ ರೀ-ಸರ್ವೆ ಮಾಡಿ ಅದನ್ನು ಲಿಫ್ಟ್ ಮಾಡುವಂತಹ ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಂಡಿದೆಯೇ? ಅಥವಾ ಮತ್ತೆ ಹೊಸದಾಗಿ ಸರ್ವೆ ಮಾಡಿಸುತ್ತಾರೆಯೇ, ಅಥವಾ ಮಾಡಿಸಿರುವುದರಲ್ಲಿ ನಮ್ಮ ಪ್ರದೇಶವೂ ಪಟ್ಟಿಯಲ್ಲಿ ಸೇರಿದೆಯೇ ಎಂಬುದನ್ನು ಮಾನ್ಯ ಮಂತ್ರಿಯವರು ತಿಳಿಸಬೇಕು.

ಅಧ್ಯಕ್ಷರು : ತಾವು ಇದಕ್ಕೆ ಬೇರೆ ಪ್ರಶ್ನೆಯನ್ನು ಕೇಳಿ; ಈಗ ತಾವು ತುಮಕೂರು ಜಿಲ್ಲೆಯ ಬಗ್ಗೆ ಕೇಳಿದರೆ ಅದಕ್ಕೆ ಉತ್ತರ ಎಲ್ಲಿ ಇರುತ್ತದೆ?

ಧಾರವಾಡ ಜಿಲ್ಲೆಯಲ್ಲಿ ರೇಷ್ಮೆ ಬೆಳೆ ಅಭಿವೃದ್ಧಿ ಪಡಿಸುವ ಬಗ್ಗೆ

209 (2240) : **ಶ್ರೀ ಬೆಲ್ಲದ ಚಂದ್ರಕಾಂತ ಗುರಪ್ಪ (ಧಾರವಾಡ) :** ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಧಾರವಾಡ ಜಿಲ್ಲೆಯಲ್ಲಿ ರೇಷ್ಮೆ ಅಭಿವೃದ್ಧಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳು ಹಾಗೂ ಸರ್ಕಾರ ನೀಡಿರುವ ಸೌಲಭ್ಯಗಳೇನು;

(ಆ) ರೇಷ್ಮೆ ಬೆಳೆಯುವಲ್ಲಿ ಪ್ರಗತಿ ಸಾಧಿಸಿರುವ ಬಗ್ಗೆ ತಾಲ್ಲೂಕುವಾರು ಕ್ಷೇತ್ರದ ವಿವರ ಒದಗಿಸುವುದು;

(ಇ) ಧಾರವಾಡ ಜಿಲ್ಲೆಯ ರೇಷ್ಮೆ ಇಲಾಖೆಯಲ್ಲಿ ಇರುವ ಸಿಬ್ಬಂದಿಯ ವಿವರ ಹಾಗೂ ಈ ಬಗ್ಗೆ ಆಗುತ್ತಿರುವ ಖರ್ಚಿನ ಬಗ್ಗೆ ಪ್ರತ್ಯೇಕ ವಿವರ ಒದಗಿಸುವುದು;

ಶ್ರೀ ಎಂ ಮಹದೇವ (ರೇಷ್ಮೆ ಮತ್ತು ಜವಳಿ ಸಚಿವರು) :

(ಅ) ಧಾರವಾಡ ಜಿಲ್ಲೆಯಲ್ಲಿ ರೇಷ್ಮೆ ಕೃಷಿಯನ್ನು ಅಭಿವೃದ್ಧಿ ಪಡಿಸಲು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಪ್ರಗತಿಯಲ್ಲಿದೆ. ರಾಜ್ಯ ಮತ್ತು ಜಿಲ್ಲಾವಲಯ ಯೋಜನೆಯಡಿ ರೇಷ್ಮೆ ಕೃಷಿ ಬಗ್ಗೆ ಕ್ಷೇತ್ರೋತ್ಸವ, ಕಾರ್ಯಾಗಾರಗಳು ವಸ್ತು ಪ್ರದರ್ಶನ ಏರ್ಪಡಿಸುವುದು, ದ್ವಿತಳಿಗೂಡಿಗೆ ಪ್ರೋತ್ಸಾಹ ನೀಡುವುದು, ರೇಷ್ಮೆ ಬೆಳೆಗಾರರ ಮನೆಗಳನ್ನು ಸೋಂಕು ನಿವಾರಕಗಳಿಂದ ಕಾಲಾನುಕಾಲಕ್ಕೆ ಶುದ್ದೀಕರಿಸಲು ರೋಗ ನಿಯಂತ್ರಣ ಕಾರ್ಯಕ್ರಮ ಕೈಗೊಳ್ಳುವುದು, ರೇಷ್ಮೆ ಹುಳು ಸಾಕಣೆಯಲ್ಲಿ ರೆಂಬೆ ಪದ್ಧತಿ ಕೈಗೊಳ್ಳುವವರಿಗೆ ಸಹಾಯ ಧನ ನೀಡುವುದು, ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿಯಲ್ಲಿ ಅರ್ಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೇಷ್ಮೆ ಬೆಳೆಗಾರರಿಗೆ ಪ್ರತ್ಯೇಕ ಮನೆ ನಿರ್ಮಾಣಕ್ಕೆ ಸಹಾಯಧನ, ರೇಷ್ಮೆ

ಹುಳು ಸಾಕುವ ಸಲಕರಣೆ ಸರಬರಾಜು ಇತ್ಯಾದಿ ಸವಲತ್ತುಗಳನ್ನು ಒದಗಿಸಲಾಗುತ್ತಿದೆ. ಫೈಲೆಟ್ ಕಾರ್ಯಕ್ರಮದಡಿ ಸಿಎಸ್‌ಆರ್ ದ್ವಿತಳಿ ಸಂಸ್ಕರಣ ರೇಷ್ಮೆ ಮೊಟ್ಟೆಗಳನ್ನು ಪ್ರಗತಿಪರ ರೈತರಿಗೆ ಸರಬರಾಜು ಮಾಡಿ ನೂರು ಮೊಟ್ಟೆಗಳಿಗೆ ಸರಾಸರಿ ಇಳುವರಿ ಹೆಚ್ಚಿಸಿ ಹೆಚ್ಚಿನ ಆದಾಯ ಪಡೆಯುವಂತೆ ಮಾಡಲಾಗುತ್ತಿದೆ. ಇದಲ್ಲದೆ ಸೆರಿ-2000 ಯೋಜನೆಯಡಿ ತರಬೇತಿ ಕಾರ್ಯಕ್ರಮ, ಕೆಟಲಿಟಿಕ್ ಅಭಿವೃದ್ಧಿ ಕಾರ್ಯಕ್ರಮದಡಿ ರೇಷ್ಮೆ ಹುಳು ಸಾಕುವ ಮನೆಗೆ ಸಹಾಯಧನ ಹಾಗೂ ಹಿಪ್ಪುನೇರಳೆಯಲ್ಲಿ ಹನಿ ನೀರಾವರಿ ಅಳವಡಿಸುವವರಿಗೆ ಸಹಾಯಧನವನ್ನು ನೀಡಲಾಗುತ್ತಿದೆ.

ಧಾರವಾಡ ಜಿಲ್ಲೆಗೆ 1999-2000ನೇ ಸಾಲಿನಲ್ಲಿ ರೇಷ್ಮೆ ಕೃಷಿ ಅಭಿವೃದ್ಧಿಗೆ ವಿವಿಧ ಕಾರ್ಯಕ್ರಮಗಳಡಿಯಲ್ಲಿ ಹಂಚಿಕೆ ಮಾಡಿರುವ ವಂಟನೆಯ ವಿವರವನ್ನು ಅನುಬಂಧ -1 ರಲ್ಲಿ ನಮೂದಿಸಿದೆ.

(ಆ) ಅನುಬಂಧ - I

ತಾಲ್ಲೂಕು	ಹಿಪ್ಪುನೇರಳೆ ನಾಟಿ (ಎಕರೆ)	ಚಾಕಿಯಾದ ಮೊಟ್ಟೆ (ಲಕ್ಷ)	ರೇ. ಗೂಡು ಉತ್ಪಾದನೆ (ಮೆ. ಟನ್)
ಧಾರವಾಡ	25	0.127	4.94
ಹುಬ್ಬಳ್ಳಿ	122	0.603	7.51
ಕಲಘಟಗಿ	93.20	0.227	24.48
ಒಟ್ಟು	240.20	0.957	36.92

(ಇ) ಧಾರವಾಡ ಜಿಲ್ಲೆಯ ರೇಷ್ಮೆ ಇಲಾಖೆಯಲ್ಲಿ ಅಧಿಕಾರಿ : ನೌಕರರು ಹಾಗೂ ಈ ಬಗ್ಗೆ ಆಗುತ್ತಿರುವ ಖರ್ಚು ಅನುಬಂಧ - 2 ರಲ್ಲಿ ಲಗತ್ತಿಸಿದೆ.

ಅನುಬಂಧ - 1

ಧಾರವಾಡ ಜಿಲ್ಲೆಯಲ್ಲಿ ರೇಷ್ಮೆ ಕೃಷಿ ಅಭಿವೃದ್ಧಿಗೆ 1999-2000ನೇ ಸಾಲಿನಲ್ಲಿ ವಂಟನೆ ಮಾಡಲಾದ ವಿವರಗಳು

ಕ್ರಮ ಸಂಖ್ಯೆ	ಯೋಜನೆ	1999-2000 ವಂಟನೆ
		(ಲಕ್ಷ ರೂ. ಗಳಲ್ಲಿ)
	1. ಜಿಲ್ಲಾ ವಲಯ	
01.	ರೇಷ್ಮೆ ಕೃಷಿ ಕ್ಷೇತ್ರಗಳು	1.60
02.	ಸಲಹಾ ಸೇವೆಗಳ ಪ್ರಚಾರ	0.06

03.	ಮಹಿಳಾ ಪ್ರಾತ್ಯಕ್ಷತಾ ಕ್ಷೇತ್ರ		0.26
04.	ಬೈವೋಸ್ಪೈನ್ ಗೂಡಿಗೆ ಪ್ರೋತ್ಸಾಹಧನ		0.22
05.	ರೋಗ ನಿಯಂತ್ರಣ ಕಾರ್ಯಕ್ರಮ		1.60
06.	ರೆಂಬೆಪದ್ಧತಿಗೆ ಸಹಾಯಧನ		0.38
07.	ವಿಶೇಷ ಘಟಕ ಯೋಜನೆ		5.00
08.	ಗಿರಿಜನ ಉಪಯೋಜನೆ (ಕೇಂದ್ರ)		1.00
		ಒಟ್ಟು	10.12
	1. ರಾಜ್ಯ ವಲಯ		
01.	ಬೈವೋಲ್ಟೈನ್ ಗೂಡಿಗೆ ಪ್ರೋತ್ಸಾಹಧನ		0.08
02.	ವಿಶೇಷ ಘಟಕ ಯೋಜನೆ		0.52
03.	ಗಿರಿಜನ ಉಪಯೋಜನೆ		0.52
04.	ಸೆರಿ-2000 ಯೋಜನೆ		1.25
05.	ಕೆಟಲಿಟಿಕ್ ಅಭಿವೃದ್ಧಿ ಯೋಜನೆ		0.125
06.	ಪಿ. ಎಸ್. ಎಫ್. ಎ		8.28
		ಒಟ್ಟು	13.90

ಶ್ರೀ ಬೆಲ್ಲದ ಚಂದ್ರಕಾಂತ ಗುರಪ್ಪ : ಮಾನ್ಯ ಅಧ್ಯಕ್ಷರೆ, ಧಾರವಾಡ ಜಿಲ್ಲೆಯಲ್ಲಿ ರೇಷ್ಮೆಕೃಷಿಯನ್ನು ಅಭಿವೃದ್ಧಿ ಮಾಡಲು ಎರಡು - ಮೂರು ತಾಲ್ಲೂಕುಗಳಲ್ಲಿ ಹೇಳಿ ಮಾಡಿಸಿದ ಹಾಗೆ ಹವಾಗುಣವಿದೆ ಮತ್ತು ಎಲ್ಲಾ ಅನುಕೂಲಗಳು ಇವೆ. ಈ ಇಲಾಖೆ 1984-85ರಲ್ಲಿ ಪ್ರಾರಂಭವಾಗಿದ್ದು ಇದುವರೆಗೂ ಧಾರವಾಡ ಜಿಲ್ಲೆಯಲ್ಲಿ 25 ಎಕರೆ, ಕಲಘಟ್ಟಿಗೆ ತಾಲ್ಲೂಕಿನಲ್ಲಿ 93 ಎಕರೆ, ಹುಬ್ಬಳ್ಳಿ ತಾಲ್ಲೂಕಿನಲ್ಲಿ 122 ಎಕರೆ, ಒಟ್ಟು 240 ಎಕರೆ ಮಾತ್ರ ಹದಿನೈದು ವರ್ಷಗಳಲ್ಲಿ ಪ್ರಗತಿಯಾಗಿದೆ. ಈ ಇಲಾಖೆಗೆ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ವೆಚ್ಚ ಮಾಡಿ ಸಿಬ್ಬಂದಿವರ್ಗವನ್ನು ಇಟ್ಟಿದ್ದೀರಿ. ಆದರೆ ಈ ಪ್ರದೇಶದಲ್ಲಿ ಏಕೆ ರೇಷ್ಮೆಕೃಷಿ ಬೆಳವಣಿಗೆಯಾಗುತ್ತಿಲ್ಲ? ಇದಕ್ಕೆ ಕಾರಣ ಏನು? ಅಲ್ಲಿರುವಂತಹ ಸಿಬ್ಬಂದಿಗಳಿಗೆ ಸರ್ಕಾರ ಸಾಕಷ್ಟು ಖರ್ಚು ವೆಚ್ಚ ಮಾಡಿದೆ. ಆದರೆ ಅದಕ್ಕೆ ತಕ್ಕಂತೆ ಏಕೆ ರೇಷ್ಮೆಕೃಷಿ ಬೆಳವಣಿಗೆಯಾಗುತ್ತಿಲ್ಲವೆನ್ನುವುದನ್ನು ಮಾನ್ಯ ಮಂತ್ರಿಯವರು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅನುಬಂಧ -2

ಧಾರವಾಡ ಜಿಲ್ಲೆಯಲ್ಲಿ ರೇಷ್ಮೆ ಇಲಾಖೆಯಲ್ಲಿ ಇರುವ ಸಿಬ್ಬಂದಿ ವಿವರ ಹಾಗೂ ಅವರಿಗಾಗಿ 1997-98 ರಿಂದ 1999-2000 ರವರೆಗೆ ಆದ ಖರ್ಚಿನ ವಿವರ

ಕ್ರ. ಸಂ.	ಸಂಸ್ಥೆಯ ಹೆಸರು	ಸಿಬ್ಬಂದಿಗಳ ವಿವರ		ಖರ್ಚಿನ ವಿವರ		
				1997-98	1998-99	1999-2000
1	2	3	4	5	6	7
1.	ರೇಷ್ಮೆ ಉಪನಿರ್ದೇಶಕರ	1. ರೇಷ್ಮೆ ಉಪನಿರ್ದೇಶಕರು	1			
	ಕಛೇರಿ (ಜಿ.ಪ) ರಾಯಾಪೂರ	2. ಪ್ರಥಮ ದರ್ಜೆ ಸಹಾಯಕರು	2			
	ಧಾರವಾಡ	3. ವಾಹನ ಚಾಲಕರು	1			
		4. ಜವಾನ	1	491782	483901	577854
		5. ಅಧೀಕ್ಷಕರು	1	77170	86487	113570
		6. ಪ್ರಥಮ ದರ್ಜೆ ಸಹಾಯಕರು	1	62577	71829	97316
		7. ದ್ವಿತೀಯ ದರ್ಜೆ ಸಹಾಯಕರು (ಸಂ)	1	55618	50049	65769
2.	ಪ್ರಾಚಾರ್ಯರು, ರೇಷ್ಮೆ	1. ರೇಷ್ಮೆ ಉಪನಿರ್ದೇಶಕರು	1			
	ತರಬೇತಿ ಶಾಲೆ, ರಾಯಪೂರ	2. ರೇಷ್ಮೆ ಸಹಾಯಕ ನಿರ್ದೇಶಕರು	2			
		3. ರೇಷ್ಮೆ ನಿರೀಕ್ಷಕರು	3			
		4. ರೇಷ್ಮೆ ಪ್ರದರ್ಶಕರು	1			
		5. (ಸಂ) ಗ್ರೂಪ್ (ಸಿ)	3			

1	2	3	4		5	6	7
		6. (ಸಂ) ಗ್ರೂಪ್ (ಡಿ)	3				
		7. ದಿನಗೂಲಿ ನೌಕರ	1		923224	1054457	1299003
3.	ರೇಷ್ಮೆ ಸಹಾಯಕರ ನಿರ್ದೇಶಕರ ಕಛೇರಿ, ಹುಬ್ಬಳ್ಳಿ	1. ರೇಷ್ಮೆ ಸಹಾಯಕ ನಿರ್ದೇಶಕರು	1				
		2. ಕಛೇರಿ ಅಧೀಕ್ಷಕರು	1				
		3. ಪ್ರಥಮ ದರ್ಜೆ ಸಹಾಯಕರು	1+2	ವೇತನ	628395	922997	803244
		4. ದ್ವಿತೀಯ ದರ್ಜೆ ಸಹಾಯಕರು	1	ಪ್ರವಾಸಭತ್ಯೆ	54139	67000	50551
		5. ವಾಹನ ಚಾಲಕರು	3				
4.	ತಾಂತ್ರಿಕ ಸೇವಾ ಕೇಂದ್ರ ಹುಬ್ಬಳ್ಳಿ	1. ರೇಷ್ಮೆ ವಿಸ್ತರಣಾಧಿಕಾರಿ	1				
		2. ರೇಷ್ಮೆ ಪ್ರದರ್ಶಕರು	8				
		3. ವಾಹನ ಚಾಲಕರು	1				
		4. ಜವಾನ	1		785895	903276	1140319
		5. ರೇಷ್ಮೆ ಪ್ರದರ್ಶಕರು	1		47220	59128	51402
		6. ರೇಷ್ಮೆ ಪ್ರವರ್ತಕರು (ಸಂ)	2				
		7. ಗ್ರೂಪ್ 'ಡಿ' (ಸಂ)	3		450740	223087	250504
		8. ದಿನಗೂಲಿ ನೌಕರರು	7		89371	106496	115377
5.	ತಾಂತ್ರಿಕ ಸೇವಾ ಕೇಂದ್ರ, ಕಲಘಟಗಿ	1. ರೇಷ್ಮೆ ವಿಸ್ತರಣಾಧಿಕಾರಿ	1				
		2. ರೇಷ್ಮೆ ನಿರೀಕ್ಷಕರು	1				
		3. ರೇಷ್ಮೆ ಪ್ರದರ್ಶಕರು	3				
		4. ರೇಷ್ಮೆ ಪ್ರವರ್ತಕರು (ಸಂ)	1				
		5. ಗ್ರೂಪ್ 'ಡಿ' (ಸಂ)	1		420597	487259	683470

1	2	3	4	5	6	7
6.	ರೇಷ್ಮೆ ಬಿತ್ತನೆ ಕೋಠಿ	1. ರೇಷ್ಮೆ ವಿಸ್ತರಣಾಧಿಕಾರಿ	1			
		2. ಹಿರಿಯ ರೇಷ್ಮೆ ನಿರೀಕ್ಷಕರು	1			
		3. ರೇಷ್ಮೆ ಪ್ರದರ್ಶಕರು	2			
		4. ರೇಷ್ಮೆ ಪ್ರವರ್ತಕರು	4			
		5. ರೇಷ್ಮೆ ಪ್ರವರ್ತಕರು (ಸಂ)	2			
		6. ಗ್ರೂಪ್ 'ಡಿ' (ಸಂ)	4			
		7. ದಿನಗೂಲಿ ನೌಕರರು	8	666844	821653	1005982
7.	ರೇಷ್ಮೆ ಕೃಷಿ ಕ್ಷೇತ್ರ,	1. ರೇಷ್ಮೆ ನಿರೀಕ್ಷಕರು	1			
	ಧಾರವಾಡ	2. ರೇಷ್ಮೆ ಪ್ರವರ್ತಕರು	1	155415	137386	184345
8.	ಸರ್ಕಾರಿ ರೇಷ್ಮೆ ಗೂಡು	1. ರೇಷ್ಮೆ ವಿಸ್ತರಣಾಧಿಕಾರಿ	1			
	ಮಾರುಕಟ್ಟೆ, ಹುಬ್ಬಳ್ಳಿ	2. ರೇಷ್ಮೆ ನಿರೀಕ್ಷಕರು	1			
	(ರಾಯಾಪೂರ)	3. ರೇಷ್ಮೆ ಪ್ರದರ್ಶಕರು	6			
		4. ರೇಷ್ಮೆ ಪ್ರವರ್ತಕರು	2			
		5. ಪ್ರಥಮ ದರ್ಜೆ ಸಹಾಯಕರು	1			
		6. ದ್ವಿತೀಯ ದರ್ಜೆ ಸಹಾಯಕರು (ಸಂ)	1			
		7. ಜವಾನ	1	734140	828426	1145075
9.	ತಾಂತ್ರಿಕ ಸೇವಾ ಕೇಂದ್ರ (ರೀ)	1. ರೇಷ್ಮೆ ವಿಸ್ತರಣಾಧಿಕಾರಿ	1			
		2. ರೇಷ್ಮೆ ನಿರೀಕ್ಷಕರು	2			
		3. ವಾಹನ ಚಾಲಕರು	1			
		4. ಗ್ರೂಪ್ 'ಸಿ' (ಸಂ)	5	507262	499575	922655

ಶ್ರೀ ಎಂ. ಮಹದೇವ್ (ರೇಷ್ಮೆ ಸಚಿವರು) : ಮಾನ್ಯ ಅಧ್ಯಕ್ಷರೆ, ಧಾರವಾಡ ಜಿಲ್ಲೆಯಲ್ಲಿ ರೇಷ್ಮೆ ಅಭಿವೃದ್ಧಿಗೋಸ್ಕರ ನಾವು ಈಗ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಇದುವರೆಗೂ ಸಿಬ್ಬಂದಿಗಳ ಕೊರತೆ ಇತ್ತು, ಇನ್ನು ಮುಂದೆ ಸಿಬ್ಬಂದಿಗಳ ಕೊರತೆಯನ್ನು ನೀಗಿಸಿ ಎಕ್ಸ್‌ಟೆನ್‌ಷನ್ ಪ್ರೋಗ್ರಾಂಗೆ ಹೆಚ್ಚಿನ ಗಮನವನ್ನು ಕೊಡುತ್ತೇವೆ, ಮತ್ತೆ ಉತ್ತಮವಾದಂತಹ ಸೀಡ್ಸ್ ಇರಲಿಲ್ಲ ಉತ್ತಮವಾದಂತಹ ಸೀಡ್ಸ್‌ಗಳನ್ನು ಹಾಗೂ ಮೊಟ್ಟೆಗಳನ್ನು ಒದಗಿಸುವಂಥಾದ್ದಕ್ಕೆ ಕಾರ್ಯಕ್ರಮಗಳನ್ನು ಇನ್ನು ಮುಂದೆ ಹಾಕಿಕೊಳ್ಳುತ್ತಿದ್ದೇವೆ, ಅಲ್ಲದೆ ನೀರಾವರಿ ಪ್ರದೇಶಗಳನ್ನು ಸಹ ನಾವು ಗುರುತು ಮಾಡುತ್ತಿದ್ದೇವೆ. ಅಲ್ಲಿ ಬೈವೋಲ್ಟಿನ್ ಅನ್ನು ಹೆಚ್ಚಿಗೆ ಬೆಳೆಯುವಂಥಾದ್ದಕ್ಕೆ ಇಲಾಖೆಯಿಂದ ತರಬೇತಿ, ಮತ್ತಿತರ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಿದ್ದೇವೆ. ಧಾರವಾಡ ಜಿಲ್ಲೆಯಲ್ಲಿ ಉತ್ತಮವಾದಂತಹ ಹವಾಗುಣವಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಅಲ್ಲಿಗೆ ಮೊದಲ ಪ್ರಾಶಸ್ತ್ಯವನ್ನು ಮುಂದಿನ ವರ್ಷಗಳಲ್ಲಿ ಕೊಟ್ಟು ಇದನ್ನು ಅಭಿವೃದ್ಧಿಪಡಿಸುವಂಥಾದ್ದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಬೆಲ್ಲದ್ ಚಂದ್ರಕಾಂತ ಗುರಪ್ಪ : ಮಾನ್ಯ ಅಧ್ಯಕ್ಷರೆ, ಈ ಇಲಾಖೆ 1985ರಲ್ಲಿ ಮಾನ್ಯ ವೈ. ಕೆ. ರಾಮಯ್ಯನವರು ಮಂತ್ರಿಯಾಗಿದ್ದಾಗ ದೊಡ್ಡ ಪ್ರಮಾಣದಲ್ಲಿ ಇನ್‌ವೆಸ್ಟ್ ಮಾಡಿ ಪ್ರಾರಂಭವಾಯಿತು. ಆದರೆ ಏನು ಪ್ರಯೋಜನವಾಗುತ್ತಿಲ್ಲ. ಇದರ ಬಗ್ಗೆ ಸರ್ಕಾರ ಗಮನ ಹರಿಸಬೇಕು. ಇದಕ್ಕೆ ಇಷ್ಟೊಂದು ಸಿಬ್ಬಂದಿವರ್ಗದವರು ಇದ್ದು, ಆ ಪ್ರದೇಶದಲ್ಲಿ ಉತ್ತಮವಾದಂತಹ ಹವಾಮಾನ, ಭೂಮಿಗುಣ ಹೊಂದಿದೆ, ಚಿಕ್ಕಚಿಕ್ಕ ರೈತರು ಇದ್ದಾರೆ. ಇವತ್ತು ಉದ್ಯೋಗವನ್ನು ಬಯಸಿ ಎಷ್ಟೊ ಮಂದಿ ಯುವಕರು ನೌಕರಿಗಾಗಿ ಬರುತ್ತಿದ್ದಾರೆ, ಇಂಥವರಿಗೆಲ್ಲಾ ಉದ್ಯೋಗ ಕೊಟ್ಟು, ಅವರು ಸ್ವಾವಲಂಬಿಗಳಾಗಿ ಬದುಕುವಂಥಾದ್ದಕ್ಕೆ ಅನುಕೂಲ ಮಾಡಬೇಕು. ಇವರು ಗ್ರಾಮೀಣ ಪ್ರದೇಶದಿಂದ ನೌಕರಿಗಾಗಿ ನಗರಗಳಿಗೆ ವಲಸೆ ಬರಬಾರದೆಂದರೆ, ರೇಷ್ಮೆ ವ್ಯವಸಾಯ ಬಹಳ ಉತ್ತಮವಾದಂತಹದ್ದಾಗಿದೆ, ಇದರ ಬಗ್ಗೆ ಈ ಇಲಾಖೆ ಆಸಕ್ತಿ ವಹಿಸಿ ಕೆಲಸ ಮಾಡಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ನಾನು ಮಾನ್ಯ ಮಂತ್ರಿಯವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಹದೇವ್ : ಮಾನ್ಯ ಅಧ್ಯಕ್ಷರೆ, ಈಗ ಸರ್ಕಾರದಿಂದ "ರೇಷ್ಮೆ ಸಂಪತ್ತು" ಎನ್ನುವ ಯೋಜನೆಯನ್ನು ಮಾಡಿದ್ದೇವೆ. ಇದರಲ್ಲಿ ಸಣ್ಣ ರೈತರು, ಅತಿ ಸಣ್ಣ ರೈತರು; ಎಸ್. ಸಿ / ಎಸ್. ಟಿ ಜನಾಂಗದವರು, ಅಂಗವಿಕಲರು, ಮಹಿಳೆಯರು, ಇವರುಗಳಿಗೆ ಉದ್ಯೋಗವನ್ನು ಒದಗಿಸುವಂಥಾದ್ದು, ಈ ರೇಷ್ಮೆ ಬೆಳೆಯನ್ನು ಅಭಿವೃದ್ಧಿ ಪಡಿಸುವಂಥಾದ್ದು, ನೀರಾವರಿ ಸೌಲಭ್ಯವನ್ನು ಕೊಡುವಂಥಾದ್ದು, ಮನೆಗಳನ್ನು ಕಟ್ಟಿಕೊಂಡುವಂಥಾದ್ದು, ಉಪಕರಣಗಳನ್ನು ಕೊಡುವಂಥಾದ್ದು, ಸಣ್ಣ ರೈತರ ಜಮೀನುಗಳಲ್ಲಿ ನೀರಾವರಿ ಸೌಲಭ್ಯ ಎಲ್ಲಿ ಇದೆಯೋ ಅಂತಹ ಕಡೆಗಳಲ್ಲಿ ಬೋರ್‌ವೆಲ್‌ಗಳನ್ನು ಕೊಡುವಂಥಾದ್ದು ಈ ಎಲ್ಲಾ ವ್ಯವಸ್ಥೆಯನ್ನು ನಾವು ಈ "ರೇಷ್ಮೆ ಸಂಪತ್ತು" ಯೋಜನೆಯಡಿಯಲ್ಲಿ ಮಾಡುತ್ತಿದ್ದೇವೆ. ಇನ್ನು ಮುಂದೆ ಸೆಮಿನಾರ್‌ಗಳನ್ನು ಮಾಡಿಸಿ ಜನರಿಗೆ ಇದರ ಬಗ್ಗೆ ಪ್ರಚಾರ ಮಾಡಿಸಬೇಕೆಂದು ಇದೆ, ಮತ್ತೆ ನಾನೇ ಧಾರವಾಡ ಜಿಲ್ಲೆಗೆ ವೈಯಕ್ತಿಕವಾಗಿ ಆಸಕ್ತಿ ವಹಿಸಿ ಮುಂದಿನ ವರ್ಷದಿಂದ ರೇಷ್ಮೆ ಅಭಿವೃದ್ಧಿಯ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆಂದು ಆಶ್ವಾಸನೆಯನ್ನು ಕೊಡುತ್ತೇನೆ.

ಶ್ರೀ ಬೆಲ್ಲದ್ ಚಂದ್ರಕಾಂತ ಗುರಪ್ಪ : ಮಾನ್ಯ ಅಧ್ಯಕ್ಷರೆ, ಈ ಇಲಾಖೆಗೆ ಇರುವಂಥ ಸಿಬ್ಬಂದಿಗಳು ಎಷ್ಟು ಇದ್ದಾರೋ ಅಷ್ಟು ಮಂದಿ ರೈತರು ಈ ವ್ಯವಸಾಯದಲ್ಲಿ ತೊಡಗಿಸಿಕೊಂಡಿಲ್ಲ, ಇದೇ ಈ ಇಲಾಖೆಯ ಸಾಧನೆ 15 ವರ್ಷಗಳಲ್ಲಿ ಆಗಿರುವಂಥಾದ್ದು. ಆ ದೃಷ್ಟಿಯಿಂದ ಅಲ್ಲಿ ಇನ್‌ವೆಸ್ಟ್ ಮಾಡಿರುವಂತಹ ಹಣ ಲಾಸ್ ಆಗಿದೆ. ಇಂತಹ ಇಲಾಖೆಯನ್ನು ಹೇಗೆ ಸರಿ ಮಾಡುತ್ತೀರಿ? ಇವತ್ತು ರೈತರಿಗೆ ಉದ್ಯೋಗವನ್ನು ಒದಗಿಸಬೇಕು. ಎಸ್. ಸಿ. / ಎಸ್. ಟಿ. ಜನಾಂಗದವರಿಗೆ ಈ ಸ್ಕೀಮ್ ಇದೆ, ಇದರಲ್ಲಿ ಎಷ್ಟು ಜನರಿಗೆ ತಾವು ಉದ್ಯೋಗವನ್ನು ಒದಗಿಸಿ ಅವರನ್ನು ಸ್ವಾವಲಂಬಿಗಳನ್ನಾಗಿ ಮಾಡಿದ್ದೀರಿ? ಧಾರವಾಡ ಜಿಲ್ಲೆ ಎಷ್ಟು ದೊಡ್ಡದಾದ ಜಿಲ್ಲೆ! 105 ಹಳ್ಳಿಗಳು ಇವೆ. ಬೇಕಾದಷ್ಟು ಹಿಡುವಳಿ ಭೂಮಿ, ಸಣ್ಣ ಸಣ್ಣ ಹಿಡುವಳಿ ಭೂಮಿ ಇದೆ. ಇವರಿಗೆ ಅಲ್ಲಿ ರೇಷ್ಮೆಯನ್ನು ಬೆಳೆಯುವಂಥಾದ್ದಕ್ಕೆ ಸಾಧ್ಯವಾಗಿಲ್ಲ, ಕಲಗಟ್ಟಿಗೆ ತಾಲ್ಲೂಕಿನಲ್ಲೂ ಸಾಕಷ್ಟು ಸಣ್ಣ ಸಣ್ಣ ಹಿಡುವಳಿ ಭೂಮಿ ಇದೆ, ಅಲ್ಲೂ ಕೂಡ ಏನು ಕೆಲಸ ಆಗಿಲ್ಲ. ಈ ರೀತಿ ಇರುವಾಗ ಯಾವ ಪ್ರದೇಶಗಳಲ್ಲಿ ಈ ಇಲಾಖೆ ಕೆಲಸವನ್ನು ಮಾಡುತ್ತಿದೆಯೆಂಬುದನ್ನು ಮಾನ್ಯ ಮಂತ್ರಿಯವರು ಹೇಳಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಹದೇವ್ : ಮಾನ್ಯ ಅಧ್ಯಕ್ಷರೆ, 1997-98 ರಲ್ಲಿ ಧಾರವಾಡ ಜಿಲ್ಲೆಯಲ್ಲಿ 247 ಎಕರೆಗಳಲ್ಲಿ ರೇಷ್ಮೆ ಬೆಳೆಯನ್ನು ಬೆಳೆಯಲಾಗಿದೆ. 1998-99 ರಲ್ಲಿ 52 ಎಕರೆಗಳಲ್ಲಿ ಮತ್ತೆ 1999-2000 ರಲ್ಲಿ 31 ಎಕರೆಗಳಲ್ಲಿ ರೇಷ್ಮೆ ಬೆಳೆ ಕಡಿಮೆಯಾಗಿದೆ. ಆದರೆ ಅಪ್-ಟು-ಡೇಟ್ ಆಗಿರುವುದು, 1997-98 ರಲ್ಲಿ 20 ಹೆಕ್ಟೇರುಗಳು, 1998-99 ರಲ್ಲಿ 20 ಹೆಕ್ಟೇರುಗಳು, 1999-2000 ದಲ್ಲಿ 4 ಹೆಕ್ಟೇರುಗಳು. ಇದಕ್ಕೆ ಹಣವನ್ನು ಖರ್ಚು ಮಾಡತಕ್ಕಂಥಾದ್ದು ಎಷ್ಟೆಂದರೆ, 1999-2000ಕ್ಕೆ ಸ್ಟೇಟ್ ಸೆಕ್ಟಾರ್‌ನಿಂದ 2.6 ಲಕ್ಷ ಮತ್ತು ಡಿಸ್ಟ್ರಿಕ್ಟ್ ಸೆಕ್ಟಾರ್‌ನಿಂದ 7.61 ಲಕ್ಷಗಳು. ಇವೆಲ್ಲಾ ಸರ್ಕಾರದ ಗಮನಕ್ಕೆ ಬಂದಿದೆ. ಸನ್ಮಾನ್ಯ ಮುಖ್ಯಮಂತ್ರಿಗಳು 'ರೇಷ್ಮೆ ಸಂಪತ್ತು' ಎನ್ನುವ ಯೋಜನೆಯನ್ನು ಕರ್ನಾಟಕ ರಾಜ್ಯದಲ್ಲಿ ತಂದಿದ್ದು, ಈ ಯೋಜನೆಯಲ್ಲಿ ರೇಷ್ಮೆಯನ್ನು ಉತ್ಪಾದನೆ ಮಾಡತಕ್ಕಂಥಾದ್ದು, ಬಡವರಿಗೆ ಅನುಕೂಲ ಮಾಡತಕ್ಕಂಥ, ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳವರಿಗೆ ಅನುಕೂಲ ಮಾಡತಕ್ಕಂಥಾದ್ದು, ಮಹಿಳೆಯರಿಗೆ ಅನುಕೂಲ ಮಾಡತಕ್ಕಂಥಾದ್ದು ಮತ್ತು ಅಂಗವಿಕಲರಿಗೆ ಅನುಕೂಲ ಮಾಡತಕ್ಕಂಥಾದ್ದು ಕಾರ್ಯಕ್ರಮಗಳನ್ನು 'ರೇಷ್ಮೆ ಸಂಪತ್ತು' ಯೋಜನೆಯಲ್ಲಿ ಹಾಕಿಕೊಂಡು, ಅದನ್ನು ಅಭಿವೃದ್ಧಿ ಮಾಡಲು ಕೆಲಸ ಮಾಡುತ್ತಿದ್ದೇವೆ.

ಶ್ರೀ ಜಿ. ಚಂದ್ರಕಾಂತ ಬೆಲ್ಲದ್ : ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸಚಿವರಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ, ಧಾರವಾಡ ಜಿಲ್ಲೆಯಲ್ಲಿ ಎಲ್ಲೆಲ್ಲಿ ಬಹಳ ಅವಕಾಶವಿದೆ, ಅಲ್ಲಿ ರೈತರನ್ನು ಕರೆಸಿ, ಅಲ್ಲಿ ಇದರ ಬಗ್ಗೆ ಸೆಮಿನಾರ್‌ಗಳನ್ನು ಮಾಡಿ, ಉತ್ತೇಜನ ಕೊಟ್ಟು ಈ ಯೋಜನೆ ಸರಿಯಾಗಿ ಮುಟ್ಟುವಂಥ ಯೋಜನೆಯನ್ನೇನಾದರೂ ತೀವ್ರದಲ್ಲಿ ಮಾಡುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಇದಕ್ಕೆ ಪೂರಕವಾಗಿ ಕೇಳುತ್ತಿದ್ದೇನೆ, ನಮ್ಮಲ್ಲಿ ಕೆಲವು ತಾಲ್ಲೂಕುಗಳನ್ನು ಸೀಡ್ ಏರಿಯಾ ಎಂದು ಘೋಷಣೆ ಮಾಡಿದ್ದೀರಿ. ಸಾಗರ, ತೀರ್ಥಹಳ್ಳಿ ಬಾಗಗಳಲ್ಲಿ ಬೆಳೆಯುವಂಥಾದ್ದು ಅತ್ಯಂತ ಉತ್ಕೃಷ್ಟವಾದಂಥ ರೇಷ್ಮೆ. ನಿಮ್ಮ

ಎಕ್ಸ್‌ಟೆನ್‌ಷನ್ ಪ್ರೋಗ್ರಾಂ ನೆಲ ಕಚ್ಚಿ ಹೋಗಿದೆ. ನಿಮ್ಮ ಸಿಬ್ಬಂದಿಯವರು ಏನೇನೂ ಕೆಲಸ ಮಾಡುತ್ತಿಲ್ಲ. ತಾವು ಮಾಡಲು ಉತ್ಸಾಹದಿಂದಿದ್ದೀರಿ. ದಯಮಾಡಿ ಆ ಸಿಬ್ಬಂದಿಯವರನ್ನು ಪ್ರಚೋದನೆ ಮಾಡಿ ಈ ಕಾರ್ಯಕ್ರಮವನ್ನು ಚೆನ್ನಾಗಿ ಅನುಷ್ಠಾನ ಮಾಡಿದರೆ ಇದು ಸಣ್ಣ ಬೆಳೆಗಾರರಿಗೆ ವರದಾನವಾಗುತ್ತದೆ. ಸಣ್ಣ ಸಣ್ಣ ಕೃಷಿಕರ ಕೈಗೆ ಕೆಲಸ ಸಿಗುತ್ತದೆ ಮತ್ತು ತಿಂಗಳು ತಿಂಗಳು ಸಂಬಳ ಬರುವ ಹಾಗೆ ಇದರಿಂದ ಆದಾಯ ಬರುತ್ತದೆ. ಅವರನ್ನು ಮೇಲೆತ್ತುವ ದೃಷ್ಟಿಯಿಂದ ಇದು ಒಂದು ಒಳ್ಳೆಯ ಕಾರ್ಯಕ್ರಮ. ತಾವು ಸಿಬ್ಬಂದಿ ವರ್ಗವನ್ನು ಜಾಸ್ತಿ ಮಾಡುವುದರ ಬದಲು, ಇರುವ ಸಿಬ್ಬಂದಿ ವರ್ಗದವರನ್ನು ಕೆಲಸಕ್ಕೆ ಹಚ್ಚುವುದು ಒಳ್ಳೆಯದು. ದಯವಿಟ್ಟು ಈ ಕೆಲಸ ತಮ್ಮ ಕಡೆಯಿಂದ ಆಗಬೇಕು.

ಶ್ರೀ ಎಂ. ಮಹದೇವ : ಸನ್ಮಾನ್ಯ ಸದಸ್ಯರು ಕೊಟ್ಟಿರತಕ್ಕಂಥ ಸಲಹೆ ಉಪಯುಕ್ತವಾಗಿದೆ. ಸರ್ಕಾರ ಅದರ ಬಗ್ಗೆ ಪರಿಶೀಲನೆ ಮಾಡುತ್ತದೆ. ಇದು ಗುಡಿ ಕೈಗಾರಿಕೆ, ಸಣ್ಣ ರೈತರಿಗೆ ವರದಾನವಾಗಿರತಕ್ಕಂಥ ಬೆಳೆ ಎಂದು ಅವರು ಹೇಳಿದರು. ಅದು ನಿಜ, ಒಂದು ಎಕರೆ ಬೈವೋಲ್ಟೀನ್ ಹಾಕಿದರೆ 25-30 ಸಾವಿರದವರೆಗೆ ಅನುಕೂಲವಾಗುತ್ತದೆ. ಸಿಬ್ಬಂದಿ ವರ್ಗದವರನ್ನು ಚುರುಕುಗೊಳಿಸಬೇಕು ಎಂದು ಅವರು ಸಲಹೆಯನನ್ನು ಕೊಟ್ಟಿದ್ದಾರೆ. ಅವರನ್ನು ಚುರುಕುಗೊಳಿಸತಕ್ಕಂಥ ದಿಕ್ಕಿನಲ್ಲಿ ಸರ್ಕಾರ ಕ್ರಮ ಕೈಗೊಳ್ಳುತ್ತದೆ. ಮಾನ್ಯ ಬೆಲ್ಲದ್‌ರವರು ಹೇಳಿದಂತೆ, ಧಾರವಾಡ ಜಿಲ್ಲೆಯಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಸೆಮಿನಾರ್‌ಗಳನ್ನು ಕಂಡಕ್ಟ್ ಮಾಡಿ ರೈತರಿಗೆ ಸರಿಯಾದಂಥ ತಿಳುವಳಿಕೆ ಕೊಡುತ್ತೇವೆ. ಮಾನ್ಯ ಬೆಲ್ಲದ್‌ರವರನ್ನು ಈ ಎರಡು ಸಭೆಗಳಿಗೆ ಆಹ್ವಾನ ಮಾಡಿ ಅವರ ಸಲಹೆಗಳನ್ನೂ ನಾವು ತೆಗೆದುಕೊಳ್ಳುತ್ತೇವೆ.

ಶ್ರೀ ವೈ. ಕೆ. ರಾಮಯ್ಯ : ಮಾನ್ಯ ಅಧ್ಯಕ್ಷರೆ, ನಾನು ನಾಲ್ಕು ಸಾರಿ ಎದ್ದು ನಿಂತುಕೊಂಡೆ. ನನ್ನನ್ನು ನೀವು ಮಂತ್ರಿ ಎಂದು ತಿಳಿದುಕೊಂಡಿದ್ದೀರೋ ಅಥವಾ ಸದಸ್ಯರು ಎಂದು ತಿಳಿದುಕೊಂಡಿದ್ದೀರೋ? ರೇಷ್ಮೆ ಬೆಳೆಯ ವಿಸ್ತರಣೆಗೆ ಧಾರವಾಡ ಜಿಲ್ಲೆಯಲ್ಲಿ ಪ್ರೋತ್ಸಾಹದಾಯಕವಾಗಿಲ್ಲ ಎಂದು ಮಾನ್ಯ ಬೆಲ್ಲದ್‌ರವರು ಪ್ರಸ್ತಾಪ ಮಾಡಿದ್ದಾರೆ. ಈ ಬೆಳೆ ನನಗೆಷ್ಟು ಮುಖ್ಯವೋ ತಮಗೂ ಅಷ್ಟೇ ಮುಖ್ಯ. ನನ್ನ ಕ್ಷೇತ್ರಕ್ಕೆ ಎಷ್ಟು ಜೀವನಾಡಿಯೋ, ನಿಮ್ಮ ಕ್ಷೇತ್ರಕ್ಕೂ ಅಷ್ಟೇ ಜೀವನಾಡಿಯಾಗಿರುವುದರಿಂದ ನಾನು ಮಂತ್ರಿಗಳಲ್ಲಿ ಒಂದು ವಿಷಯ ಕೇಳಲು ಇಷ್ಟಪಡುತ್ತೇನೆ. ಅಂಕಿಅಂಶಗಳನ್ನು ಅಧಿಕಾರಿಗಳು ಅವತ್ತೂ ಕೊಡುತ್ತಿದ್ದರು, ಇವತ್ತೂ ಕೊಡುತ್ತಾರೆ. ಆದರೆ ಅದೇನಿದೆಯೋ ನನಗೆ ಗೊತ್ತಿಲ್ಲ. ಆದರೆ ಇದರ ವಿಸ್ತರಣೆಯ ಕೆಲಸ ಕರ್ನಾಟಕದಲ್ಲಿ ಅತ್ಯಂತ ಕೆಟ್ಟ ಪರಿಸ್ಥಿತಿಯಲ್ಲಿ ಇದೆ ಎಂದು ನನ್ನ ಅಭಿಪ್ರಾಯ. ಅದಕ್ಕೆ ಮಂತ್ರಿಗಳು ಏನು ಮಾಡುತ್ತಾರೆಂದು ಹೇಳಬೇಕು. ನನ್ನ ಸ್ನೇಹಿತರು ಹೇಳಿದರು, ಬೈವೋಲ್ಟೀನ್ ಕಳುಹಿಸುತ್ತೇವೆ, ಮೇಲೆ ಪೇರೆಂಟ್ ಎಂದು. ನಾವು ಮೈಸೂರು ರೇಷ್ಮೆ ಬಿತ್ತನೆ ಗೂಡು ಕಳುಹಿಸಿಕೊಡುತ್ತೇವೆ. ಈ ಬಿತ್ತನೆ ವಲಯದಲ್ಲಿ ಎಷ್ಟು ಕೆಟ್ಟ ಪರಿಸ್ಥಿತಿ ಇದೆ ಎನ್ನುವುದನ್ನು ಅವರೇ ಬಂದು ನೋಡಿದ್ದಾರೆ. ಅಲ್ಲಿ ಅಧಿಕಾರಿಗಳಿಲ್ಲ, ಯಾವತ್ತೋ ಕಟ್ಟಿದಂಥ ಮೈಸೂರು ಸೀಡ್ ಕಕೂನ್ ಮಾರ್ಕೆಟ್ಟುಗಳಿಗೆ ಸುಣ್ಣ ಹೊಡೆದಿಲ್ಲ. ಚಾಕಿ ತಯಾರು ಮಾಡುವಂಥ ಕಟ್ಟಡಗಳು ಮಳೆ ಬಂದರೆ ಸೋರುತ್ತವೆ. ಇದನ್ನು ಅವರನ್ನೇ ಕರೆದುಕೊಂಡು ಹೋಗಿ ತೋರಿಸಿದ್ದೇನೆ. ಅಲ್ಲಿ ಏನೇನು ಮಾಡಬೇಕು ಎನ್ನುವ ಪಟ್ಟಿ ಅವರ ಗಮನದಲ್ಲಿದೆ. ರೇಷ್ಮೆ ವಲಯದ ಪರಿಸ್ಥಿತಿಯನ್ನು ಸುಧಾರಣೆ ಮಾಡಲು

ನಾನು ಕಳೆದ ಆರು ತಿಂಗಳಲ್ಲಿ ಸುಮಾರು ಹತ್ತು ಕಾಗದ ಬರೆದಿದ್ದೇನೆ, ಆದರೆ ಅವರು ಇವತ್ತಿನವರೆಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ಇದು ಪ್ರಶ್ನೋತ್ತರ ಸಮಯವಾದ್ದರಿಂದ ನಾನು ಭಾಷಣ ಮಾಡಲು ಇಷ್ಟಪಡುವುದಿಲ್ಲ. ನಿಮ್ಮ ಹಿತದೃಷ್ಟಿಯಿಂದ, ಕೋಲಾರದ ನನ್ನ ಎಲ್ಲ ಸ್ನೇಹಿತರ ಹಿತದೃಷ್ಟಿಯಿಂದ, ರಾಜ್ಯದ ಉದ್ಯಮದ ದೃಷ್ಟಿಯಿಂದ, ಈ ಬಿತ್ತನೆ ವಲಯವನ್ನು ಸುಧಾರಣೆ ಮಾಡಲು ಮಂತ್ರಿಗಳು ಏನಾದರೂ ಕ್ರಮ ತೆಗೆದುಕೊಳ್ಳುತ್ತಾರೆಯೇ ಎನ್ನುವುದನ್ನು ತಿಳಿಸಬೇಕು ಎಂದು ನಿಮ್ಮೆಲ್ಲರ ಪರವಾಗಿ ನಾನು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಮಹದೇವ : ಮಾನ್ಯ ಸದಸ್ಯರಿಗೆ ಇರುವಷ್ಟೇ ಕಳಕಳಿ ಸರ್ಕಾರಕ್ಕೂ ಇದೆ. ಅವರು ಕೊಟ್ಟಿರತಕ್ಕಂಥ ಸಲಹೆಗಳು ಬಹಳ ಉತ್ತಮವಾಗಿವೆ. ಅವರ ಸಲಹೆಗಳನ್ನು ಸರ್ಕಾರ ಗಮನಕ್ಕೆ ತೆಗೆದುಕೊಂಡು, ಅದಕ್ಕೆ ಬಜೆಟ್‌ನಲ್ಲಿ ಸಾಕಷ್ಟು ಪ್ರಾವಿಷನ್ ಮಾಡಿಕೊಂಡು ಏನೇನು ಕೆಲಸಕಾರ್ಯಗಳನ್ನು ಮಾಡಬೇಕೋ ಅದನ್ನು ಮಾಡುತ್ತದೆ.

ಶ್ರೀ ವೈ. ಕೆ. ರಾಮಯ್ಯ : ಮಾಮೂಲಿಯಾಗಿದ್ದರೆ ನಾನು ಕೇಳುತ್ತಲೇ ಇರಲಿಲ್ಲ, ಒಪ್ಪಿಕೊಂಡು ಸುಮ್ಮನೆ ಕುಳಿತುಕೊಳ್ಳುತ್ತಿದ್ದೆ. ಆದರೆ ಅವು ಮಳೆಗೆ ಸೋರುತ್ತವೆ, ಹೀಗಾದರೆ ಚಾಕಿ ಹೇಗೆ ಕಟ್ಟಬೇಕು ಎಂದು ಹೇಳಿ

ಶ್ರೀ ಎಂ. ಮಹದೇವ : ಇದಕ್ಕೆ ಒತ್ತು ಕೊಡುತ್ತೇವೆ.

ಶ್ರೀ ವೈ. ಕೆ. ರಾಮಯ್ಯ : ನಿರ್ದಿಷ್ಟವಾಗಿ ಏನಾದರೊಂದು ಕಾರ್ಯಕ್ರಮವನ್ನು ಹೇಳಲಿ. ಸುಮ್ಮನೆ, ಪರಿಶೀಲನೆ ಮಾಡುತ್ತೇವೆ we will consider it ಎಂದು ಹೇಳತಕ್ಕಂಥಾದ್ದು ಇವುಗಳನ್ನೆಲ್ಲ ಕೇಳಿ ಕೇಳಿ ನನಗೆ ಸಾಕಾಗಿದೆ. ನಾನು ಅವರನ್ನು ಕರೆದುಕೊಂಡು ಹೋಗಿ ತೋರಿಸಿದ್ದೇನೆ, ಮೀಟಿಂಗ್ ಮಾಡಿದ್ದೇನೆ, ಸೋರುವ ಬಿಲ್ಡಿಂಗ್‌ಗೆ ಅವರನ್ನೇ ಕರೆದುಕೊಂಡು ಹೋಗಿ ನಿಲ್ಲಿಸಿದ್ದೇನೆ.

ಅಧ್ಯಕ್ಷರು : ಎಲ್ಲೆಲ್ಲಿ ಕಟ್ಟಡ ಸೋರುತ್ತಿದೆ, ಅವನ್ನು ರಿಪೇರಿ ಮಾಡುತ್ತೇವೆ ಎಂದು ಹೇಳಿ.

ಶ್ರೀ ವೈ. ಕೆ. ರಾಮಯ್ಯ : ಅವರ ಅಧಿಕಾರಿಗಳು ದುಡ್ಡು ಇಲ್ಲ ಎಂದು ಹೇಳುತ್ತಾರಂತೆ. ಅದಕ್ಕಾಗಿ ದುಡ್ಡು ಹೊಂಚುತ್ತಾರೆಯೇ, ಮಾಡುತ್ತಾರೆಯೇ, ಇಲ್ಲವೇ ಎಂದು ಹೇಳಲಿ. ಸುಮ್ಮನೆ ಎಲ್ಲವನ್ನು ಮುಚ್ಚಿಕೊಂಡು ಹೋಗುವುದು ಸರಿಯಲ್ಲ.

ಶ್ರೀ ಎಂ. ಮಹದೇವ : ನಾನು ನಿರ್ದಿಷ್ಟವಾಗಿಯೇ ಹೇಳುತ್ತೇನೆ, ಬಿತ್ತನೆ ವಲಯದಲ್ಲಿ ಸುಧಾರಣೆ ಬಗ್ಗೆ 18 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಲಾಗಿದೆ.